# ಭಾರತೀಯ ಸಂಸ್ಕೃತಿಯಲ್ಲಿ ಧಾರ್ಮಿಕ ಸಾಮರಸ್ಯ

ಸ್ವಾಮಿ ಆತ್ಮಜ್ಞಾನಂದ

ಅನ್ಯ ಧರ್ಮ, ಸಂಸ್ಕೃತಿಗಳ ಸಂಪರ್ಕ ಆರಂಭದಿಂದಲೂ ಭಾರತದಲ್ಲಿ ಕಂಡುಬರುತ್ತದೆ; ಆದರೆ ಅವುಗಳಲ್ಲಿನ ಅಂಶಗಳನ್ನು ತನ್ನಲ್ಲಿ ಅಳವಡಿಸಿಕೊಂಡು ಬೆಳೆಯುವುದೇ ನಮ್ಮ ಸಂಸ್ಕೃತಿಯ ವೈಶಿಷ್ಟ್ಯ. ಇದು ಪೂರ್ಣ ಪ್ರಮಾಣದಲ್ಲಿ ವ್ಯಕ್ತವಾದದ್ದು ಶ್ರೀರಾಮಕೃಷ್ಣರಲ್ಲಿ. ಈ ಕುರಿತು ಬರೆದಿರುವ ಪೂಜ್ಯ ಸ್ವಾಮೀಜಿಯವರು 'ವಿವೇಕಪ್ರಭ' ದ ಸಂಪಾದಕರಾಗಿದ್ದರು. ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರೂ ಆಗಿದ್ದ ಅವರು ಪ್ರಸ್ತುತ ಚಂಡೀಗಢ ರಾಮಕೃಷ್ಣ ಮಿಷನ್ ಆಶ್ರಮದ ಅಧ್ಯಕ್ಷರಾಗಿದ್ದಾರೆ.

ಪ್ರತಿಯೊಬ್ಬ ವ್ಯಕ್ತಿಗೂ ತನ್ನದೇ ಆದ ವ್ಯಕ್ತಿತ್ವವಿರುವಂತೆ ಪ್ರತಿಯೊಂದು ರಾಷ್ಟ್ರಕ್ಕೂ ಒಂದು ಜೀವಾಳವಿದೆ ಎನ್ನುತ್ತಾರೆ ಸ್ವಾಮಿ ವಿವೇಕಾನಂದರು. ಪಾಶ್ಚಾತ್ಯ ದೇಶಗಳಲ್ಲಿ ನಾವು ಕಾಣುವ ವಾಣಿಜ್ಯ-ವ್ಯಾಪಾರ-ಉದ್ಯಮಗಳ ಬೆಳವಣಿಗೆ ಅವುಗಳ ಜೀವ ಸೂತ್ರವಾಗಿದ್ದರೆ ಭಾರತವು ಅನಾದಿಕಾಲದಿಂದಲೂ ಸತ್ಯಾನ್ವೇಷಣೆಯನ್ನೇ ತನ್ನ ಉಸಿರಾಟವಾಗಿಸಿಕೊಂಡಿದೆ. ''ಯಾವುದರೊಂದಿಗೆ ಹೋಲಿಸಿದರೆ ಇಂದಿನ ವಿಜ್ಞಾನದ ನವನವಾನ್ವೇಷಣೆಗಳು ಕೇವಲ ಪ್ರತಿಧ್ವನಿಗಳಂತೆ ತೋರುವುವೋ ಅಂಥ ವೇದಾಂತದ ತತ್ತ್ವದ ಆಧ್ಯಾತ್ಮಿಕ ಔನ್ನತ್ಯದಿಂದ ಹಿಡಿದು ವಿಗ್ರಹಾರಾಧನೆಯೆಂಬ ಅಲ್ಪ ಭಾವನೆ, ಲೆಕ್ಕವಿಲ್ಲದಷ್ಟು ಪುರಾಣಗಳ ರಾಶಿ, ಬೌದ್ಧರ ಅಜ್ಞೇಯತಾವಾದ, ಜೈನರ ನಾಸ್ತಿಕತೆ ಮುಂತಾದವುಗಳವರೆಗೆ ಎಲ್ಲಕ್ಕೂ ಹಿಂದೂಧರ್ಮದಲ್ಲಿ ಸ್ಥಾನವಿದೆ,'' *(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂಪುಟ ೧, ಪು.೮)* ಎನ್ನುತ್ತಾರೆ ಸ್ವಾಮೀಜಿ. ಪಾಶ್ಚಾತ್ಯ ತತ್ತ್ವಶಾಸ್ತ್ರಗಳಲ್ಲಿ ಇಂದು ನಾವು ಅಧ್ಯಯನ ಮಾಡುವ ಎಲ್ಲ ವಿಚಾರಗಳೂ ಭಾರತದಲ್ಲಿ ಆಗಲೇ ಇದ್ದವು ಎಂಬುದು ಸಿದ್ಧ. ಭಾರತೀಯ ತತ್ತ್ವಶಾಸ್ತ್ರದಲ್ಲಿ ಇರುವ ವೈವಿಧ್ಯತೆ ಮತ್ತೆಲ್ಲೂ ಕಂಡುಬರುವುದಿಲ್ಲ. ಕ್ರಿ. ಪೂ. ಆರು ಸಾವಿರ ವರ್ಷಗಳಿಗಿಂತ ಹಿಂದೆಯೇ ಸಾಂಖ್ಯ-ಯೋಗ ಸಿದ್ಧಾಂತಗಳು ಭಾರತದಲ್ಲಿದ್ದವು. ವೇದಗಳನ್ನು ಅಂಗೀಕರಿಸದ, ಭೌತವಾದವನ್ನೇ ಹೋಲುವ ಚಾರ್ವಾಕ ಹಾಗೂ ಲೋಕಾಯತ ದರ್ಶನಗಳೂ ಭಾರತದಲ್ಲಿ ಸ್ಥಾನ ಪಡೆದಿದ್ದವು. ಶ್ರೀಶಂಕರಾಚಾರ್ಯರು ಇವರೆಲ್ಲರ ವಿರುದ್ಧ ವೈಚಾರಿಕವಾಗಿ ಹೋರಾಡಿ ಅದ್ವೈತ ಮತವನ್ನು ಸ್ಥಾಪಿಸಬೇಕಾಯಿತು. ಅಂತೆಯೇ ನಾಸ್ತಿಕ ಮತಗಳಾದ ಬೌದ್ಧ ಹಾಗೂ ಜೈನ ಧರ್ಮಗಳನ್ನೂ ಭಾರತದ ಜನರು ಆದರಿಸಿದರು. ವೇದಗಳನ್ನು ಪ್ರಮಾಣಗಳೆಂದು ಒಪ್ಪದ ಧರ್ಮಗಳನ್ನು ನಾಸ್ತಿಕ ಧರ್ಮಗಳೆಂದು ಕರೆಯುತ್ತಿದ್ದರೆ ವಿನಃ ಅವರಿಗೆ ಅವಕಾಶವೇ ಇಲ್ಲವೆಂಬ ಧೋರಣೆ ತಾಳಲಿಲ್ಲ. ಉಪನಿಷತ್ತುಗಳಲ್ಲಿಯೇ ಪ್ರಶ್ನಿಸುವುದರ ಮೂಲಕ ಸತ್ಯವನ್ನು ಕಂಡುಕೊಳ್ಳುವ ಧೀರತನವನ್ನು ಕಾಣುತ್ತೇವೆ.

ಪ್ರಾಚೀನಕಾಲದಿಂದಲೂ 'ವಸುಧೈವ ಕುಟುಂಬಕಂ' — ವಸುಧೆಯೇ ಒಂದು ಕುಟುಂಬದಂತೆ ಹಾಗೂ 'ಯತ್ರ ವಿಶ್ವಂ ಭವತ್ಯೇಕನೀಡಮ್' — ಎಲ್ಲಿ ವಿಶ್ವವೇ ಒಂದು ಗೂಡಿನಂತೆ ಆಗುವುದೋ ಎಂಬ ಅತ್ಯುನ್ನತ ಆದರ್ಶಗಳು ಭಾರತದಲ್ಲಿ ಸಾಮಾನ್ಯ ಜನರಿಗೂ ತಿಳಿದಿದ್ದವು. ಇದು ಸಾಮಾನ್ಯ ಆದರ್ಶಗಳಲ್ಲಿ ವೇದಾಂತದಲ್ಲಿ ಬರುವ 'ಸರ್ವಭೂತೇ ಈಶ್ವರದರ್ಶನಂ' ಅಂದರೆ ಎಲ್ಲರಲ್ಲೂ ಒಂದೇ ಸಚ್ಚಿದಾನಂದವನ್ನು ಕಾಣುವುದು, ಒಂದು ಅದ್ಭುತವಾದ ಜೀವನದರ್ಶನ. ಇದನ್ನೇ ಸ್ವಾಮಿ ವಿವೇಕಾನಂದರು 'ಅನುಷ್ಠಾನ ವೇದಾಂತ'ವೆಂದರು. ಶ್ರೀಮದ್‌ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಹೇಳುತ್ತಾನೆ, ''ಯಾರು ಹೇಗೆ ನನ್ನನ್ನು ಆಶ್ರಯಿಸುತ್ತಾರೋ ಅವರನ್ನು ಹಾಗೆಯೇ ನಾನು ಅನುಗ್ರಹಿಸುತ್ತೇನೆ'' *(೪.೧೧)* — ಎಲ್ಲ ಪಥಪಂಗಡಗಳನ್ನೂ ಸಮನ್ವಯಿಸಿದ ಪ್ರಥಮ ವ್ಯಕ್ತಿ ಶ್ರೀಕೃಷ್ಣ. ಆ ಸಮಯದಲ್ಲಿದ್ದ ಎಲ್ಲ ಯೋಗಮಾರ್ಗಗಳನ್ನು ಅಂಗೀಕರಿಸಿ ಅವೆಲ್ಲದಕ್ಕೂ ತನ್ನ ಒಪ್ಪಿಗೆಯನ್ನು ಇತ್ತ ಮಹಾನ್ ಚೇತನ ಶ್ರೀಕೃಷ್ಣ.

ಎಲ್ಲರನ್ನೂ ತನ್ನವರೆಂದು ಭಾವಿಸುವುದು, ಜಾತಿ-ಧರ್ಮ-ಸಂಕೋಲೆಗಳನ್ನು ಮೀರುವುದು ಇವೆಲ್ಲ ಅಸಾಧ್ಯ ಎಂದು ನೀವು ತಿಳಿದಿದ್ದರೆ ಕಳೆದ ಶತಮಾನದಲ್ಲಿ ಈ ಮಹದಾದರ್ಶನವನ್ನು ಸಾಧಿಸಿ ತೋರಿಸಿದ ಶ್ರೀಮಾತೆ ಶಾರದಾದೇವಿಯವರ ನುಡಿಗಳನ್ನು ಕೇಳಿ: ''ನಾನೊಂದು ಮಾತನ್ನು ಹೇಳುತ್ತೇನೆ ಕೇಳು. ನಿನಗೆ ಶಾಂತಿ ಬೇಕಿದ್ದರೆ ಯಾರ ದೋಷವನ್ನೂ ನೋಡಬೇಡ ಕಂದ. ನಿನ್ನ ಕೊರತೆಗಳನ್ನೇ ನೋಡಿಕೊ. ಪ್ರಪಂಚವನ್ನೇ ನಿನ್ನದಾಗಿಸಿಕೊಳ್ಳಲು ಕಲಿತುಕೊ. ಯಾರೂ ಪರಕೀಯರಲ್ಲ, ಮಗು. ಪ್ರಪಂಚವೇ ನಿನ್ನದು.'' ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದ್ದ ಶ್ರೀಮಾತೆ ಹುಟ್ಟಿ ಬೆಳೆದದ್ದು ಹಳ್ಳಿಯ ಜಾತಿ-ಮತ ಸಂಕೋಲೆಗಳನ್ನು ಕಟ್ಟು-ನಿಟ್ಟಾಗಿ ಪಾಲಿಸುತ್ತಿದ್ದ ವಾತಾವರಣದಲ್ಲಿ. ಜೊತೆಗೆ ಅವತಾರ ಪುರುಷರೆಂದು ಪ್ರಖ್ಯಾತರಾದ ಪತಿಯೊಂದಿಗಿದ್ದರೂ ಜಗನ್ಮಾತೆಯೆಂದು ಭಕ್ತರು ಬಂದು ಆರಾಧಿಸುತ್ತಿದ್ದರೂ, ಗುರುವೂ ಪೂಜಾರ್ಹರು ಆಗಿದ್ದರೂ 'ಶರತ್ ಹೇಗೆ ನನ್ನ ಮಗನೋ ಅಮ್ಜದ್ ಕೂಡ ನನ್ನ ಮಗನೇ' ಎಂದು ದಿಟ್ಟವಾಗಿ ಹೇಳಬಲ್ಲವರಾಗಿದ್ದರು ಶ್ರೀಮಾತೆ. ಅಂದರೆ ಸಮತ್ವವನ್ನು ಸಾಧಿಸುವುದು ಎಟುಕದ ಆದರ್ಶವಲ್ಲ. ಯಾವ ತಾತ್ತ್ವಿಕ ಸಮತ್ವವನ್ನು ಶ್ರೀರಾಮಕೃಷ್ಣರು ತಮ್ಮ ಆಧ್ಯಾತ್ಮಿಕ ಅನುಭೂತಿಯಿಂದ ತೋರಿಸಿಕೊಟ್ಟರೊ ಅದನ್ನು ತಮ್ಮ ಜೀವನದಲ್ಲಿ ಅನುಷ್ಠಾನ ಮಾಡಿದ್ದರು ಶ್ರೀಮಾತೆ. 'ನಾನು ಎಲ್ಲರಿಗೂ ತಾಯಿ. ಯಾವುದೇ ವ್ಯತ್ಯಾಸವನ್ನು ನಾನು ಕಾಣ

ಲಾರೆ' ಎಂಬು ದೃಢ ನಿಲುವಿನಿಂದ ಕೂಡಿದ್ದ ಅವರು ಅದನ್ನು ತಮ್ಮ ಜೀವನದ ಮೂಲಕ ಆಚರಿಸಿ ಇತರರಿಗೂ ತೋರಿಸಿಕೊಟ್ಟರು.

ಇದು ಭಾರತ ಸಂಸ್ಕೃತಿಯ ಆದರ್ಶ, ಅನಾದಿಕಾಲದಿಂದಲೂ ಈ ಪುಣ್ಯಭೂಮಿಯಲ್ಲಿ ಅನುಷ್ಠೇಯವಾಗಿದ್ದ ಆದರ್ಶವಿದು. ದೇಶದ ಎಲ್ಲ ಜನರೂ ಇದನ್ನು ಒಪ್ಪಿ ಆಚರಿಸುತ್ತಿದ್ದರೆಂದು ಅಲ್ಲ. ಯಾರು ಇದನ್ನು ಸಾಧಿಸಿದ್ದರೋ ಅವರು ಅಸಾಮಾನ್ಯರಾದರು, ಮಹನೀಯರಾದರು. ಎಲ್ಲ ಸಮಾಜಗಳಲ್ಲೂ ಹೀಗೆ ಅಲ್ಲವೆ? ಆದರ್ಶವು ಎಂದಿಗೂ ಅತ್ಯುನ್ನತವಾಗಿರಬೇಕು, ಅದನ್ನು ತಲುಪಲು ಕಠಿಣ ಸಾಧನೆ, ಮನಸ್ಸಿನ ತರಬೇತಿಗಳು ಇರಬೇಕಲ್ಲವೆ? ಶ್ರೀಕೃಷ್ಣ ಭಗವದ್ಗೀತೆಯಲ್ಲಿ ಹೇಳುತ್ತಾನೆ, ''**ಏವಂ ಪರಂಪರಾಪ್ರಾಪ್ತಂ ಇಮಂ ರಾಜರ್ಷಯೋ ವಿದುಃ । ಸ ಕಾಲನೇಹ ಮಹತಾ ಯೋಗೋ ನಷ್ಟಃ ಪರಂತಪ॥** *(೪.೨)* — ಹೀಗೆ ಪರಂಪರೆಯಿಂದ ಬಂದ ಈ ಜ್ಞಾನವನ್ನು ರಾಜರ್ಷಿಗಳು ತಿಳಿದಿದ್ದರು; ರಾಜರೂ ಕೂಡ ಈ ಆದರ್ಶವನ್ನು ಕಂಡುಕೊಂಡಿದ್ದರು. ಮುಂದೆ ಶ್ರೀ ಕೃಷ್ಣ ತಿಳಿಸುವಂತೆ, ''ದಾರದಲ್ಲಿ ಮಣಿಗಳು ಪೋಣಿಸಲ್ಪಟ್ಟ ಹಾಗೆ ಇದೆಲ್ಲವೂ (ಅಂದರೆ, ನಾವು ಕಾಣುವ ಈ ವೈವಿಧ್ಯಮಯ ಜಗತ್ತು, ವ್ಯತ್ಯಾಸಗಳು) ನನ್ನಲ್ಲಿ ಪೋಣಿಸಲ್ಪಟ್ಟಿವೆ.'' *(೭.೯)* ಜೀವಜಗತ್ತಿನ ಅಂತಃಸತ್ವ ಒಂದೇ ಎಂದು ತಿಳಿಯುವ ತನಕ ಮಾನವ ಸಹಜ ವಾದ ದೋಷದೃಷ್ಟಿಯಿಂದ ನಾವು ಮುಕ್ತರಾಗೆವು. ಆದ್ದ ರಿಂದಲೇ '**ಉದಾರ ಚರಿತಾನಾಂ ತು ವಸುಧೈವ ಕುಟುಂಬಕಂ**' ಎಂದು ಹೇಳಿರುವುದು. ಉದಾರವಾದ ವಿಶ್ವವ್ಯಾಪಿಯಾದ ಚರಿತ್ರೆ ಯಾರಿಗಿದೆಯೋ ಅಂತಹವರು ಮಾತ್ರ ಎಲ್ಲರನ್ನೂ ತನ್ನವರ ನ್ನಾಗಿಸಿಕೊಳ್ಳಬಲ್ಲರು.

ಸ್ವಾಮಿ ವಿವೇಕಾನಂದರ ಜೀವನದಲ್ಲಿ ನಡೆದ ಎರಡು ಘಟನೆಗಳನ್ನು ಇಲ್ಲಿ ನೆನಪಿಸಿಕೊಳ್ಳೋಣ. ಉತ್ತರ ಭಾರತದಲ್ಲಿ ಪರಿವ್ರಾಜಕರಾಗಿ ಸಂಚರಿಸುತ್ತಿದ್ದಾಗ ಬಿಸಿಲಿನ ತಾಪದಿಂದ ಸ್ವಾಮೀಜಿ ಬಹಳ ಬಳಲಿದ್ದರು. ತೀವ್ರ ಬಾಯಾರಿಕೆಯಿಂದ ದುರ್ಬಲವಾಗಿ ಕುಸಿದಿದ್ದರು. ಅಂತಹ ಸಮಯದಲ್ಲಿ ಇವರ ಪರಿಸ್ಥಿತಿಯನ್ನು ಕಂಡು ಒಬ್ಬ ಮುಸ್ಲಿಂ ಫಕೀರ ತನ್ನ ಬಳಿಯಿದ್ದ ಕೆಲವು ಸೌತೆಕಾಯಿಗಳನ್ನು ಅವರಿಗೆ ನೀಡಿದ. ಯಾವುದೇ ಸಂಕೋಚವಿಲ್ಲದೆ ಪರಮಹಂಸ ಸಂನ್ಯಾಸಿಗಳಾದ ಸ್ವಾಮೀಜಿ ಅವುಗಳನ್ನು ತಿಂದು ಚೇತರಿಸಿಕೊಂಡರು. ಅಮೆರಿಕದಲ್ಲಿ ಜಗತ್ಪ್ರಸಿದ್ಧರಾಗಿ ಭಾರತಕ್ಕೆ ಮರಳಿ ಬಂದ ಮೇಲೆ ಅವರಿಗಾಗಿ ಆಯೋಜಿಸಲಾಗಿದ್ದ ಒಂದು ಸನ್ಮಾನ ಸಭೆಯಲ್ಲಿ ಆ ಮುಸ್ಲಿಂ ಫಕೀರನನ್ನು ಕಂಡು ಗುರುತಿಸಿ ಸ್ವಾಮೀಜಿ ಆತನನ್ನು ಬರಮಾಡಿಕೊಂಡು ಕೃತಜ್ಞತೆಯಿಂದ ಸತ್ಕರಿಸಿದರು. ತಾನು ವಿಶ್ವವರೇಣ್ಯನೆಂಬ ಧೋರಣೆಯನ್ನು ತಾಳದೆ ಮಹನೀಯತೆ ಮೆರೆದರು. ಮತ್ತೊಮ್ಮೆ ಭಾರತದಿಂದ ಅಮೇರಿಕ ದೇಶಕ್ಕೆ ಪ್ರಯಾಣ ಮಾಡಲು ಸಿದ್ಧರಾಗಿ ಮುಂಬಯಿ ಬಂದರನ್ನು ತಮ್ಮ ಸೋದರ ಸಂನ್ಯಾಸಿಯಾದ ಸ್ವಾಮಿ ತುರೀಯಾನಂದರೊಂದಿಗೆ ತಲುಪಿದ್ದರು. ಸ್ವಾಮೀಜಿ. ಜಹಜನ್ನು ಹತ್ತುವ ಮುನ್ನ ಸ್ವಾಮೀಜಿ ಹೇಳಿದರು, ''ಹರಿ ಭಾಯಿ, ಭಗವಂತ ಇತ್ಯಾದಿ ಎಷ್ಟರ ಮಟ್ಟಿಗೆ ಅನುಭೂತಿಯಾಗಿದೆಯೋ ತಿಳಿಯದು. ಆದರೆ ಇಡೀ ವಿಶ್ವವನ್ನೇ ವ್ಯಾಪಿಸಿದೆ ನನ್ನ ಹೃದಯ.'' '**ವಸುಧೈವ ಕುಟುಂಬಕಂ**' ಎಂಬ ಆದರ್ಶವನ್ನು ಸ್ವಾಮೀಜಿ ತಮ್ಮದಾಗಿಸಿಕೊಂಡಿದ್ದರು. ಬೇಲೂರು ಮಠದಲ್ಲಿ ಒಮ್ಮೆ ರಾತ್ರಿಯ ಹೊತ್ತು ತಮ್ಮ ಕೋಣೆಯಿಂದ ಹೊರಬಂದು ಚಿಂತಾಮಗ್ನರಾಗಿ ಅತ್ತಿಂದಿತ್ತ ಸಂಚರಿಸುತ್ತಿದ್ದರು. ಇದನ್ನು ಕಂಡ ಅವರ ಒಬ್ಬ ಶಿಷ್ಯರು ಏನಾಯಿತೆಂದು ಕೇಳಿದರು. ನಿದ್ರೆ ಬರಲಿಲ್ಲವೇ ಎಂಬ ಪ್ರಶ್ನೆಯನ್ನು ಕೇಳಿದರು. ಸ್ವಾಮೀಜಿ ಹೇಳಿದರು, ''ಎಲ್ಲೋ ಯಾವುದೋ ದುರ್ಘಟನೆಯಾಗಿದೆ. ಅನೇಕ ಜನರ, ಪೀಡಿತರ ಆರ್ತನಾದ ಸಂವೇದನೆಗಳು ನನಗೆ ನಿದ್ರಿಸಲು ಬಿಡುತ್ತಿಲ್ಲ. ಅಯ್ಯೋ ಪಾಪ! ಅದೆಷ್ಟು ದುಃಖ ನೋವುಗಳನ್ನು ಅನುಭವಿಸುತ್ತಿರುವರೋ ಏನೋ!'' ಎಂದು ತಮ್ಮನ್ನು ಕಾಡುತ್ತಿದ್ದ ಚಿಂತೆಯನ್ನು ಹೇಳಿದರು. ಮರುದಿನ ವಾರ್ತೆಯಲ್ಲಿ ಸಾವಿರಾರು ಮೈಲು ದೂರದ ಪ್ರದೇಶದಲ್ಲಿ ನಡೆದ ಭೂಕಂಪದ ಸುದ್ದಿ ವರದಿಯಾಗಿತ್ತು. ಹೀಗೂ ಸಾಧ್ಯವೇ ಎಂದು ನಮಗನಿಸುತ್ತದೆ. ಕೇವಲ 'ನಾನು ಹಾಗೂ ನನ್ನದು', ನನ್ನ ದೇಹ, ನನ್ನ ಭಾವನೆ-ಅನಿಸಿಕೆಗಳು' ಎನ್ನುವ ಸಂಕುಚಿತ ಮಾನವ ಲಕ್ಷಣಗಳನ್ನು ಮೀರಿ 'ಎಲ್ಲರೂ ನನ್ನವರೇ', 'ಇಡೀ ವಿಶ್ವವೇ ಒಂದೇ ಸತ್ಯದ ಅಭಿವ್ಯಕ್ತಿ', ಎಂಬ ಭಗವಂತನ ಲಕ್ಷಣಗಳನ್ನು ಸಾಧಿಸುವುದು ಆಧ್ಯಾತ್ಮಿಕ ಅನುಭೂತಿಯ ಚರಮ ಸ್ಥಿತಿ.

ಇತಿಹಾಸವನ್ನು ಓದಿದಾಗ ಭಾರತವು ಜ್ಞಾನಾರ್ಜನೆಗೆ ಹಾಗೂ ಜ್ಞಾನಿಗಳಿಗೆ ಪ್ರಸಿದ್ಧವಾಗಿತ್ತೆಂಬುದು ತಿಳಿದು ಬರುತ್ತದೆ. ಜೊತೆಗೆ ವಾಣಿಜ್ಯ ಕ್ಷೇತ್ರದಲ್ಲಿ ಆಗಿನ ಎಲ್ಲ ದೇಶಗಳೊಂದಿಗೆ ವಿನಿಮಯ ಹೊಂದಿತ್ತು. ಹಡಗುಗಳನ್ನು ತಯಾರು ಮಾಡುವುದರಲ್ಲೂ ಭಾರತ ಹೆಸರು ಗಳಿಸಿತ್ತು. ಎಲ್ಲಾ ದೇಶಗಳಿಂದಲೂ ಬರುತ್ತಿದ್ದ ವ್ಯಾಪಾರಿಗಳನ್ನು ಹಾಗೂ ವಿದ್ಯಾರ್ಥಿಗಳನ್ನು ಯಥಾರೀತಿ ಸತ್ಕರಿಸುತ್ತ ಉದಾರ ಮನೋಭಾವನ್ನು ಇಲ್ಲಿನ ಜನರು ಮೆರೆದರು. ಇಲ್ಲಿ ಅಧ್ಯಯನ ಮಾಡಲು ಗ್ರೀಕರು, ಹೂಣರು, ಯವನರು, ಚೀನಾದೇಶದವರು ಬರುತ್ತಿದ್ದರಲ್ಲದೆ ತುರ್ಕಿ, ಅರೇಬಿಯಾ, ಗಾಂಧಾರ (ಇಂದಿನ ಆಫ್ಘಾನಿಸ್ಥಾನ್) ದೇಶಗಳಿಂದಲೂ ವಿದ್ಯಾರ್ಥಿಗಳು ಬಂದು ಗಣಿತ ಹಾಗೂ ಖಗೋಳ ಶಾಸ್ತ್ರಗಳನ್ನು ಕಲಿತರು ಎಂದು ದಾಖಲೆಗಳಿವೆ. ಹಂಪಿ, ಬಾದಾಮಿ, ಬೇಲೂರು ಹಾಗೂ ಹಳೇಬೀಡುಗಳಂತಹ ಪುಣ್ಯಕ್ಷೇತ್ರಗಳಲ್ಲಿರುವ ದೇವಸ್ಥಾನಗಳ ಶಿಲ್ಪಗಳಲ್ಲಿ ಹೊರಗಿನ ದೇಶಗಳ ಜನರನ್ನೂ ಕಾಣಬಹುದು. ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಅವರು ಭಾಗವಹಿಸುತ್ತಿದ್ದರು ಹಾಗೂ ದೇವಸ್ಥಾನದಂತಹ ಪವಿತ್ರಸ್ಥಾನಗಳಲ್ಲೂ ಅವರನ್ನು ದಾಖಲಿಸುತ್ತಿದ್ದರೆಂದರೆ ಸಮಾಜದಲ್ಲಿ ಅವರಿಗೆ ಗೌರವವನ್ನು ನೀಡುತ್ತಿದ್ದರೆಂದು ಖಚಿತವಾಗಿ ಹೇಳಬಹುದು. ವಂಶ

ಪರಂಪರೆಯನ್ನು ತಿಳಿಸುವ ಗೋತ್ರವಿವರಗಳಲ್ಲಿ ಹೊರಗಿನ ದೇಶದಿಂದ ಬಂದವರನ್ನು ಸೇರಿಸಿಕೊಂಡಿರುವುದು ಕಂಡುಬರುತ್ತದೆ. ಒಟ್ಟಾರೆ ಇದೊಂದು inclusivist ಸಮಾಜವಾಗಿತ್ತು ಎಂಬುದು ನಿಶ್ಚಿತ. ಭಾರತೀಯರು ವಾಣಿಜ್ಯಕ್ಕಾಗಿ ಹಾಗೂ ಧರ್ಮಪ್ರಚಾರಕ್ಕಾಗಿ ಹೊರಗಿನ ದೇಶಗಳಿಗೆ ಹೋಗುತ್ತಿದ್ದರು. ಬೌದ್ಧ ಧರ್ಮದ ಅನುಯಾಯಿಗಳು ಈಜಿಪ್ಟ್ ದೇಶದವರೆಗೂ ಹರಡಿದ್ದರು ಹಾಗೂ ಪೂರ್ವದಲ್ಲಿ ಇಂಡೋನೇಷ್ಯಾ, ಮಲೇಷ್ಯಾ, ಜಾವಾ, ಸುಮಾತ್ರ ದ್ವೀಪಗಳಲ್ಲೂ ಭಾರತೀಯ ಸಂಸ್ಕೃತಿ ಪ್ರಬಲವಾಗಿ ಬೇರೂರಿತ್ತು. ಚೋಳರಾಜರು ಈ ದೇಶಗಳೊಂದಿಗೆ ವಾಣಿಜ್ಯ ಸಂಪರ್ಕ ಹೊಂದಿದ್ದರು ಹಾಗೂ ಆ ದೇಶಗಳಲ್ಲಿ ಇಂದಿಗೂ ರಾಮಾಯಣದ ನೃತ್ಯ-ನಾಟಕಗಳನ್ನು ಆಡುತ್ತಾರೆ. ಅಲ್ಲಿನ ದೇವಸ್ಥಾನಗಳಲ್ಲಿ ಪುರಾಣಗಳ ಹಾಗೂ ರಾಮಾಯಣದ ಕಥೆಗಳ ಶಿಲ್ಪಗಳಿವೆ.

ಒಂದು ವಿಶೇಷವನ್ನು ಗಮನಿಸಬೇಕು. ಈ ಎಲ್ಲ ದೇಶಗಳೊಂದಿಗೆ ಸಂಪರ್ಕ ಹಾಗೂ ವ್ಯಾಪಾರ ಹೊಂದಿದ್ದರೂ ಅವರುಗಳನ್ನು ತಮ್ಮ ಗುಲಾಮರನ್ನಾಗಿಸಿಕೊಳ್ಳಲಿಲ್ಲ ಭಾರತದ ರಾಜರು. ಭಾರತದೊಂದಿಗೆ ಸಂಪರ್ಕ ಹೊಂದಿದ್ದ ಆ ದೇಶಗಳೆಲ್ಲ ತಮ್ಮ ತಮ್ಮ ಸಂಸ್ಕೃತಿಗಳನ್ನು ಮತ್ತಷ್ಟು ಉನ್ನತಗೊಳಿಸಿಕೊಂಡಿದ್ದವು. ಭಾರತದ ಸಂಸ್ಕೃತಿಯೂ ಇತರ ದೇಶದ ಸಂಸ್ಕೃತಿಗಳ ಸಂಪರ್ಕದಿಂದ ಸಮೃದ್ಧವಾಯಿತು. ಇದು ಹೇಗೆಂದರೆ, ನೀರಿಗೆ ಹಾಲನ್ನು ಸೇರಿಸಿ ಅದರ ರುಚಿಮೌಲ್ಯಗಳನ್ನು ಹೆಚ್ಚಿಸಿದಂತೆ ಅಥವಾ ಹಾಲಿಗೆ ಸಿಹಿಯನ್ನು ಸೇರಿಸಿ ಅದರ ಸವಿಯನ್ನು ವರ್ಧಿಸಿದಂತೆ ಸ್ವಂತದ ಅಸ್ತಿತ್ವವನ್ನು ಬಳಸಿಕೊಂಡು ಇತರರಿಂದ ಪುಷ್ಟಿಯನ್ನು ಪಡೆದಂತೆ ಇದು.

ಮುಂಡಕೋಪನಿಷತ್ತಿನಲ್ಲಿ ಒಂದು ಅದ್ಭುತವಾದ ಶ್ಲೋಕವಿದೆ: '**ಯಥಾ ನದ್ಯಃ ಸ್ಯಂದಮಾನಾಃ ಸಮುದ್ರೇಽಸ್ತಂ ಗಚ್ಛಂತಿ ನಾಮರೂಪೇ ವಿಹಾಯ! ತಥಾ ವಿದ್ವಾನ್ ನಾಮರೂಪಾದ್ವಿಮುಕ್ತಃ ಪರಾತ್ಪರಂ ಪುರುಷಮುಪೈತಿ ದಿವ್ಯಮ್॥**' *(೩.೨.೮)* 'ಹೇಗೆ ವಿಭಿನ್ನ ನದಿಗಳು ಹರಿಯುತ್ತ ಸಮುದ್ರ ಸೇರಿದಾಗ ತಮ್ಮ ಪ್ರತ್ಯೇಕ ನಾಮರೂಪಗಳನ್ನು ಕಳೆದುಕೊಂಡು ಒಂದಾಗಿಬಿಡುತ್ತವೋ ಅಂತೆಯೇ ಜ್ಞಾನಿಯು ತಮ್ಮ ನಾಮರೂಪಾದಿ ಪ್ರತ್ಯೇಕತೆ ಅಥವಾ ವೈಯಕ್ತಿಕತೆಗಳಿಂದ ಮುಕ್ತನಾಗಿ ಪರಮಪುರುಷದಲ್ಲಿ ಒಂದಾಗುತ್ತಾನೆ.' ಇದೇ ಭಾವವನ್ನು ಪ್ರತಿಬಿಂಬಿಸುತ್ತ ಸ್ವಾಮಿ ವಿವೇಕಾನಂದರು ಈ ರೀತಿಯಾಗಿ ವಿವರಿಸುತ್ತಾರೆ: ''ಬೇರೆ ಬೇರೆ ಬೆಟ್ಟಗಳಲ್ಲಿ ಹುಟ್ಟಿದ ಹಲವು ನದಿಗಳು ನೇರವಾಗಿಯೋ ಅಥವಾ ಡೊಂಕು ಡೊಂಕಾಗಿಯೋ ಹರಿದು ಕೊನೆಗೆ ಸಾಗರವನ್ನು ಸೇರುವಂತೆ ಹಲವು ಮತಗಳು ಮತ್ತು ಪಂಥಗಳು ಭಿನ್ನ ಭಿನ್ನ ಭಾವಗಳಿಂದ ಉದಯಿಸಿ ನೇರವಾಗಿಯೋ ಡೊಂಕು ಡೊಂಕಾಗಿಯೋ ಹರಿದು, ಕೊನೆಗೆ ದೇವರನ್ನು ಸೇರುತ್ತವೆ.'' *(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂಪುಟ ೬, ಪುಟ ೩೫೫)* ವೇದಗಳ ಋಷಿಗಳು. ''**ಭದ್ರಂ ಕರ್ಣೇಭಿಃ ಶ್ರುಣುಯಾಮ ದೇವಾಃ...** ನಮ್ಮ ಕಿವಿಗಳು ಒಳ್ಳೆಯ ವಿಚಾರಗಳನ್ನು ಆಲಿಸಲಿ'' ಎಂದು ಪ್ರಾರ್ಥಿಸುತ್ತಿದ್ದರು. ಅಂದರೆ ಎಲ್ಲ ಸಂಸ್ಕೃತಿಗಳ ಉನ್ನತ ವಿಚಾರಗಳನ್ನು ಸ್ವೀಕರಿಸುವ ತಮ್ಮದಾಗಿಸಿಕೊಳ್ಳುವ ಭಾವವನ್ನು ಹೊಂದಿದ್ದರು. ಧರ್ಮವು ನಿರಂತರವಾಗಿ ಬದಲಾಗುವುದು ಹಾಗೂ ಅದರಲ್ಲಿನ ವಿಚಾರಗಳನ್ನು ಸಂಸ್ಕರಿಸಿಬಹುದು ಎಂಬುದು ಭಾರತದ ನಿಲುವಾಗಿತ್ತು. ಶ್ರುತಿಗಳು ಸಾರುವ ಸತ್ಯವು ನಾನಾ ಧರ್ಮಗಳಲ್ಲಿ, ಸಂಸ್ಕೃತಿಗಳಲ್ಲಿ ವಿಭಿನ್ನವಾಗಿ ವ್ಯಕ್ತವಾಗಿದೆಯಷ್ಟೆ. ಸ್ಮೃತಿ, ಆಚಾರ-ವಿಚಾರಗಳಲ್ಲಿ ವ್ಯತ್ಯಾಸವಿದ್ದರೂ ಹಾನಿಯಿಲ್ಲ ಎಂಬ ಅರಿವು ಈ ದೇಶದಲ್ಲಿತ್ತು. ಧರ್ಮವೊಂದು ಮುಚ್ಚಿದ ಗ್ರಂಥವಲ್ಲ. ಆದ್ದರಿಂದಲೇ ಇಷ್ಟೊಂದು ವೈವಿಧ್ಯತೆಯನ್ನು ಭಾರತದಲ್ಲಿ ಕಾಣುತ್ತೇವೆ. ಸ್ವಾಮಿ ವಿವೇಕಾನಂದರು ಹೇಳುತ್ತಾರೆ, ಆದ್ದರಿಂದ ಹಿಂದುಗಳಿಗೆ ಮತಧರ್ಮಗಳ ಜಗತ್ತು ಕೇವಲ ಒಂದು ಯಾತ್ರೆಯಂತೆ. ವಿಧವಿಧವಾದ ಸ್ತ್ರೀಪುರುಷರು ಬೇರೆ ಬೇರೆ ಸ್ಥಿತಿಗತಿಗಳ ಮೂಲಕ ಒಂದೇ ಗುರಿಯನ್ನು ಸೇರುತ್ತಿರುವರು. ಪ್ರತಿಯೊಂದು ಮತಧರ್ಮವೂ ಈ ಭೌತಿಕ ಜಗತ್ತಿನ ಮಾನವನನ್ನು ದೇವರಾಗುವಂತೆ ವಿಕಾಸಗೊಳಿಸುತ್ತದೆ. ಎಲ್ಲ ಧರ್ಮಗಳ ಸ್ಫೂರ್ತಿಶಕ್ತಿಯೂ ಒಬ್ಬನೇ ದೇವರು. ಹಾಗಿದ್ದರೆ ಇಷ್ಟೊಂದು ಪರಸ್ಪರ ವಿರುದ್ಧವಾದ ಅಭಿಪ್ರಾಯಗಳು ಏಕಿವೆ? ಹಿಂದುಗಳ ಪ್ರಕಾರ ಈ ವಿರೋಧಗಳು ಕೇವಲ ತೋರಿಕೆಯವು. ಒಂದೇ ಸತ್ಯ ಬೇರೆ ಬೇರೆ ಸ್ವಭಾವಗಳುಳ್ಳ ವಿವಿಧ ಸಂದರ್ಭಗಳಿಗೆ ಹೊಂದಿಕೊಳ್ಳಲು ಪ್ರಯತ್ನಿಸುವಾಗ ಪರಸ್ಪರ ವಿರೋಧಗಳು ಕಾಣಿಸಿಕೊಳ್ಳುತ್ತವೆ ಅಷ್ಟೆ. *(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂಪುಟ ೬, ಪುಟ ೩೫೫)*

'**ಏಕಂ ಸದ್ವಿಪ್ರಾಃ ಬಹುಧಾ ವದಂತಿ**' — ಒಂದೇ ಸತ್ಯವನ್ನು ತಿಳಿದವರು ನಾನಾ ರೀತಿಯಲ್ಲಿ ವ್ಯಕ್ತಪಡಿಸಿದ್ದಾರೆ ಎಂದು ಋಗ್ವೇದವು ಹೇಳುತ್ತದೆ. ಅತ್ಯಂತ ಪ್ರಾಚೀನವಾದ ಈ ವೇದದಲ್ಲಿ ಇಂತಹ ಭಾವನೆಯಿತ್ತೆಂದರೆ ಭಾರತದ ಸಂಸ್ಕೃತಿಯ ಔನ್ನತ್ಯದ ಪರಿಚಯ ಇದರಿಂದಾಗಬೇಕು. ಯೂರೋಪಿನ ದೇಶಗಳ ಜನರು ಕಾಡುಗಳಲ್ಲಿ ಪ್ರಾಣಿಗಳಂತೆ ಜೀವಿಸುತ್ತ ಪರಸ್ಪರ ಹೊಡೆದಾಡಿಕೊಂಡಿದ್ದ ಸಮಯವದು. ಆದ್ದರಿಂದಲೇ ಈ ಅತ್ಯುನ್ನತ ಆದರ್ಶವನ್ನು ಪುನಃ ಪ್ರತಿಷ್ಠಾಪಿಸಲು ಶ್ರೀರಾಮಕೃಷ್ಣರು ಎಲ್ಲ ಧರ್ಮಗಳ ಮೂಲಕವೂ ಒಂದೇ ಸತ್ಯವನ್ನು, ಸಚ್ಚಿದಾನಂದವನ್ನು ಅನುಭವಿಸಿ, ಧರ್ಮಸಮನ್ವಯವನ್ನು ಪ್ರಮಾಣೀಕರಿಸಿದ್ದಾರೆ. ಭಾರತಭೂಮಿಯಲ್ಲಿ ಜನಿಸಿದ ನಾವೆಲ್ಲರೂ ಧನ್ಯರು. ಈ ಉದಾರಭಾವವನ್ನು ತಮ್ಮದಾಗಿಸಿಕೊಂಡಿರುವ ಇತರ ದೇಶದವರೂ ಧನ್ಯರೇ. ಮಾನವಕುಲ ಬೇರೆಲ್ಲ ಕ್ಷೇತ್ರಗಳಲ್ಲಿ ಪ್ರಗತಿಯನ್ನು ಹೊಂದಿದ್ದು ಈ ಮೂಲಭೂತ ತತ್ತ್ವದಲ್ಲಿ ಅಸಹಿಷ್ಣುತೆ, ಪರಸ್ಪರ ದ್ವೇಷಗಳನ್ನು ಬೆಳೆಸಿಕೊಂಡರೆ ನಮ್ಮೆಲ್ಲರ ವಿನಾಶವೇ ಗತಿ. ಪರಸ್ಪರ ಸಹಕರಿಸುತ್ತ, ಇತರರಿಂದ ಉನ್ನತ ವಿಚಾರಗಳನ್ನು ಗ್ರಹಿಸುತ್ತ ಜೊತೆಯಲ್ಲಿ ಪ್ರಯಾಣಿಸುತ್ತಿರುವ ಪಯಣಿಗರಂತೆ ನಾವೆಲ್ಲ ಮುನ್ನಡೆಯುವ, ಶಾಂತಿಯನ್ನು ಹಾಗೂ ಸೌಹಾ